ಮೈಸೂರ ಗೆಜಿಟ್.

ಸಂ. 44.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 21, ಸ್ ೧೯೦೯.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತೆ.

ವಿ ಷ ಯ ಸೂ.ಚಿ ಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ಮತ್ತು ಇನಾಂ ಸೂಪರ್‌ಟೆಂಡೆಂಟರು, ರೆವಿನ್ಯೂ ಕಮಿಷನರವರು, ಕಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಫಾರೆಸ್ಟ್, ರೆಜಿಸ್ಟ್ರೇಷನ್ ಮತ್ತು ಎಜ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್‌ರವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು ಡಿಸ್ಟ್ರಿಕ್ಟು ಮತ್ತು ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್‌ಟೆಂಡೆಂಟರು ಫಾರೆಸ್ಟು ಆಫೀಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್‌ಆಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದ ಪತ್ರಗಳು.

I ನೆ ಭಾಗ.

ಮೈಸೂರು ಸೀಮೆಯ ಶ್ರೀಮತ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 25ನೆ ಸೆಪ್ಟಂಬರ್ 1909.

ನಂ. 3030—ಸ್ಯಾನಿಟರಿ. 4—09—23, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಪ್ಲೇಗು ತಗುಲಿದ ಪ್ರದೇಶವೆಂದು ಆಗಿಂದಾಗೆ ಪ್ರಕಟಿಸಲ್ಪಟ್ಟಿದ್ದ ಈ ಕೆಳಗೆ ನಮೂದಿಸಿರುವ ಸ್ಥಳವು ಎರಡು ತಿಂಗಳ ಮೇಲ್ಪಟ್ಟು ಜಾಡ್ಯ ರಹಿತವಾಗಿದ್ದುದರಿಂದ ಅಂಥಾ ಪ್ಲೇಗು ತಗುಲಿದ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿದೆ.

ಸ್ಥಳ.	ತಾಲ್ಲೂಕು.
ಕುಕ್ಕೂರು	ಟಿ. ನರಸೀಪುರ

ತಾರೀಖು 25ನೆ ಸೆಪ್ಟಂಬರ್ 1909.

ನಂ. 3032—ಸ್ಯಾನಿಟರಿ 4-09-24, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1893ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ.	ತಾಲ್ಲೂಕು.
ಸೇರಳಿ	ನಂಜನಗೂಡು.

ತಾರೀಖು 5ನೆ ಅಕ್ಟೋಬರ್ 1909.

ನಂ. 3280—ಸ್ಯಾನಿಟರಿ 20-09-2, ಕಡೂರು ಡಿಸ್ಟ್ರಿಕ್ಟ್ ಶ್ರಿಂಗೇರಿ ಕಸಬಾಕ್ಕೆ ಬರುವ ದಸರಾ ಉತ್ಸವ ಕಾಲದಲ್ಲಿ ಪ್ಲೇಗು ತಗುಲಿರುವ ಪ್ರದೇಶಗಳಿಂದ ಬರುವ ಜನರು ಅಲ್ಲಿ ಗುಂಪು ಸೇರುವುದಕ್ಕೆ ಅವಕಾಶ ಕೊಟ್ಟರೆ ಅಲ್ಲಿ ಪ್ಲೇಗು ರೋಗವು ಆರಂಭವಾಗುವ ಅಪಾಯವಿರುವುದಾಗಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರಿಗೆ ತೃಪ್ತಿಕರವಾದ ಕಾರಣಗಳು ಕಂಡುಬಂದಿರುವುದರಿಂದ—

1897ನೆಯ ವರ್ಷದ 2ನೆಯ ನಂಬರ್ ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನೆಂಬ ಸಾಂಕ್ರಾಮಿಕ ಜಾಡ್ಯಗಳ ಸಂಬಂಧವಾದ ಕಾನೂನಿಂದ ತಮಗೆ ಕೊಡಲ್ಪಟ್ಟಿರುವ ಅಧಿಕಾರಗಳನ್ನು ನಡೆಸುವುದರಲ್ಲಿ ಮೈಸೂರು ಶ್ರೀಮತ್ ಮಹಾರಾಜರವರ ಸರ್ಕಾರದವರು 1909ನೆಯ ವರ್ಷದ ಅಕ್ಟೋಬರ್ 14ನೆ ತಾರೀಖಿನಿಂದ 28ನೆ ತಾರೀಖಿನ ವರೆಗೆ (ಉಭಯ ದಿನಗಳೂಸೇರಿ) ಪ್ಲೇಗು ತಗುಲಿರುವ ಪ್ರದೇಶಗಳಿಂದ ಜನರು ಅಲ್ಲಿಗೆ ಬರಕೂಡದೆಂದು ನಿಷೇಧಿಸಿರುತ್ತಾರೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಮೇಲ್ಕಂಡ ದಸರಾ ಉತ್ಸವಕ್ಕೆ ಹೋಗುವ ಜನರು ಹಿಂದಕ್ಕೆ ಕಳುಹಿಸಲ್ಪಡುವರು.

ತಾರೀಖು 5ನೆ ಅಕ್ಟೋಬರ್ 1909.

ನಂ. 3281—ಸ್ಯಾನಿಟರಿ 4-09-26, ಸಮಸ್ತ ಜನರ ತಿಳಿವಳಿಕೆಯ ಬಗ್ಗೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶವು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷ್ಷ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ವರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9383—ಮಿಸಲೇನಿಯಸ್ ಫೈಲ್ 21-96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್‌ನಾಮೆಗಳೊಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶವೆಂದು ಎಣಿಸಲ್ಪಡುವುದು.

ಸ್ಥಳ	ತಾಲ್ಲೂಕು.
ಕಿರಂಗೂರು	ಶ್ರೀರಂಗಪಟ್ಟಣ.

ತಾರೀಖು 12ನೆ ಅಕ್ಟೋಬರ್ 1909.

ನಂ. 3623—ಸ್ಯಾನಿಟರಿ. 81-09-2, ಕೊಡಗು ಚೀಫ್ ಕಮಿಷನರ್‌ರವರು ಸಾದರ್ಪಡಿರುವ 9—10—09ನೆ 77ನೆ ನಂಬರ್ ಉಳ್ಳ ಮತ್ತು ಸದರಿಯವರ ಸೆಕ್ರಿಟರಿಯವರ 11—10—09ನೆ ತಾರೀಖಿನ 1870ನೆ ನಂಬರ್ ಲೇಖನದ ಜೊತೆಗೆ ತಲ್ಪಿದ ಈ ಕೆಳಗಿನ ಇಸ್ತಿಹಾರುನಾಮೆಯನ್ನು ಸಮಸ್ತರ ತಿಳಿವಳಿಕೆ ಬಗ್ಗೆ ಪ್ರಸಿದ್ಧಪಡಿಸಿರುತ್ತದೆ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಸೆಕ್ರಿಟರಿ.

ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇ ಸ್ತಿ ಹಾ ರ್ ನಾ ಮೆ.

ತಾರೀಖು 9ನೆ ಅಕ್ಟೋಬರ್ ಸ್ ೧೯೦೯ನೆ ಇಸವಿ.

ನಂಬರ್ 77; ಕೊಡಗು ದೇಶದ ಪಾಡಿನಾಲ್ಕ್‌ನಾಡು ತಾಲ್ಲೂಕು ತಾವುನಾಡು—ಸಂಪಾಜೆನಾಡು ಭಾಗಮಂಡ್ಲ ಗ್ರಾಮದಲ್ಲಿ ಬರುವ ತುಲಾ ಸಂಕ್ರಮಣದ ಸಮಯದಲ್ಲಿ ನಡಿಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಸೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದ್ದರಿಂದ, ಸ್ ೧೮೯೭ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸ್ ೧೯೦೯ನೆ ಇಸವಿ ಅಕ್ಟೋಬರ್ ತಾರೀಖು 7 ರಿಂದ ನವಂಬರ್ 20ರ ವರೆಗೆ ಸದರೀ ಜಾತ್ರೆಗೆ ಮೈಸೂರು, ದಕ್ಷಿಣ ಕನ್ನಡಜಿಲ್ಲೆ ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರ್‌ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು.

ಟಿ. ಕೋಪಲ್ಯಾಂಡ್,
ಚೀಫ್ ಕಮಿಷನರವರ ಸೆಕ್ರಿಟರಿಯವರು.

ತಾರೀಖು 30ನೆ ಸೆಪ್ಟಂಬರ್ 1909.

ನಂ. 874—7275, ಸನ್ 1894ನೆ ಇಸವಿಯ VIIನೆ ಮಸೂದೆ ಮೈಸೂರು ಅಕ್ಸೈಜ್ ರೆಗ್ಯುಲೇಷ್ನ್ 6ನೆ ಪ್ರಕರಣವನ್ನು ಅನುಸರಿಸಿ, ಇದರಿಂದ ಪ್ರಸಿದ್ಧಪಡಿಸುವದೇನಂದರೆ :—ಈ ಕೆಳಗೆ ವಿವರಿಸಿರುವ ಜಮೀನುಗಳು ಸರ್ಕಾರಿ ಕೆಲಸಕ್ಕೆ ಅಂದರೆ, ಸೆಂಟರಿಯ ಅಲ್ಲಾಟ್ಮೆಂಟು ರಿಜಸ್ಟ್ರೆರು ನಂಬರು 398ನೆ ಪುಟಕ್ಕಾಗಿ ಬಿಸ್ತಿ ಕಾಲ್ವೆಯು ಪಟೇಲಿಯಿಂದ ಸೀರು ನುಂಗಳಿಂದಾಗಿ ಸೇರಿಸಲು ಬೇಕಾಗಿರುವದರಿಂದ ಕೆಲವು ಅಂಗಳಿಗೆ ಸೇರಿಸಲು ಬೇಕಾಗಿರುವದರಿಂದ ಕೆಲವು ಜಮೀನುಗಳನ್ನು ಸರ್ಕಾರಕ್ಕೆ ಅಕ್ಕೈಜ್ರರು ಸ್ವೀಕರಿಸಿದ್ದು ನಮಸೂದೆಯ 7 ನೆಯ ಮತ್ತು 8 (c)ನೆ ಪ್ರಕರಣಗಳನ್ನು ಸುಸರಿಸಿ, ಸಂಗಡ ಸಲ್ಲಿಸಿರುವ ಪಟ್ಟಿಯಲ್ಲಿ ಹೇಳಿರುವಂತೆ ಸರ್ಕಾರಕ್ಕೆ ಅಕ್ಕೈಜ್ರರು ಸ್ವೀಕರಿಸಿದ್ದು ನಮಸೂದೆಯ 7 ನೆಯ ಮತ್ತು 8 (c)ನೆ ಪ್ರಕರಣಗಳನ್ನು ಸುಸರಿಸಿ, ಸಂಗಡ ಸಲ್ಲಿಸಿರುವ ಪಟ್ಟಿಯಲ್ಲಿ ಹೇಳಿರುವಂತೆ ಸರ್ಕಾರಕ್ಕೆ ಅಕ್ಕೈಜ್ರರ

ತಾರೀಖು 16ನೆ ಅಕ್ಟೋಬರ್ 1909.

ನಂ. 925—7664, ಸ್ ಈ 1894ನೆ ವರ್ಷದ 7ನೆ ನಂಬರ್ ಲ್ಯಾಂಡ್ ಅಕ್ವಿಜಿಷ್ ರೆಗ್ಯುಲೇಷನಿನ 6ನೆಯ ಪ್ರಕರಣವನ್ನನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ:—ಇದರಡಿ ವಿವರಿಸಿರುವ ಜಮೀನು ಸರ್ಕಾರಿ ಕೆಲಸಕ್ಕೆ ಎಂದರೆ, ಕಾರಾಪುರದ ರಾಯಲ್ ಕ್ಯಾಂಪಿಗೋಸ್ಕರ ಅವಶ್ಯಕವಾಗಿದೆ; ಮತ್ತು ಮೇಲ್ಕಂಡ ರೆಗ್ಯುಲೇಷನಿನ 7 ಮತ್ತು 8(c) ಪ್ರಕರಣಗಳನ್ನನುಸರಿಸಿ ಮೈಸೂರು ಪಬ್ಲಿಕ್ ವರ್ಕ್ಸ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರಿಗೆ ಸದರಿ ಜಮೀನನ್ನು ಹೊಂದುವುದಕ್ಕೆ ಹುಕುಂ ಪಡೆಯಲು ಅಧಿಕಾರ ಕೊಟ್ಟಿದೆ.

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರನ ಯಾ ಮಾಲೀಕನ ಹೆಸರು.	ಸರ್ವೆ ನಂಬರು.	ಖುಷ್ಕಿ ತರಿ ಯಾ ಬಾಗಾಯಿತು.	ಒಟ್ಟು ವಿಸ್ತೀರ್ಣ.			ಖರಾಬು.		ಉಳಿದ ವಿಸ್ತೀರ್ಣ			ಕಂದಾಯ.		ಈಗ ಸರ್ಕಾರಕ್ಕೆ ಬೇಕಾಗಿರುವ ವಿಸ್ತೀರ್ಣ			ಕಂದಾಯ.		ಚತುರ್ಗಡಿ.			
							ಎ	ಗು	ಗು	ಎ	ಗು	ರೂ	ಆ	ಎ	ಗು	ರೂ	ಆ	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ಹೆಗ್ಗಡದೇವನಕೋಟೆ	ಅಂತರಸಂತೆ	ನಿಡಗಲ್ಲ	ಅನುಭವದಾರ್ ಸೈದ್ ಉಹಮದ್ ಸಾಹೇಬರ ಮಗ ಸೈದ್ ಹೈದರ್.	49	ಖುಷ್ಕಿ	7	6	4	7	2	5	8	4	16	3	7	ಕಟ್ಟೆ ಮತ್ತು 46ನೆ ನಂಬರು.	53ನೆ ನಂಬರು.	50ನೆ ನಂಬರು	ಕಪಿಲಾ ನದಿ.
				ಸೈದ್ ಹೈದರ್.	50	ಡಿಟೋ	14	1	8	13	33	8	0	8	6	3	12	48ನೆ ನಂಬರ್ ಕಟ್ಟೆ.	ಡಿಟೋ	51ನೆ ನಂಬರು.	49ನೆ ನಂಬರು.
				ಡಿಟೋ	51	ಡಿಟೋ	18	15	10	18	5	12	0	5	32	3	13	52ನೆ ನಂಬರು.	ಡಿಟೋ	53ನೆ ನಂಬರು.	50ನೆ ನಂಬರು.

ತಾರೀಖು 22ನೆ ಜೂನ್ 1909.

ನಂ. ಜನರಲ್ 7241, ಸರ್ಕಾರಿ ಅಥವಾ ಖಾಸಗಿ ಕೆಲಸದ ಉದ್ದಿಶ್ಯ ದಿವಾನ್ ಸಾಹೇಬರವರ ಭೇಟಿಗಾಗಿ ಬರುವ ಸರ್ಕಾರೀ ಉದ್ಯೋಗಸ್ಥರಿಗೂ ಇತರರಿಗೂ ಸಹ ಸರ್ಕಾರೀ ರಜಾ ದಿವಸಗಳಲ್ಲದ ಸೋಮವಾರ, ಬುಧವಾರ ಮತ್ತು ಶುಕ್ರವಾರದ ದಿವಸಗಳಲ್ಲಿ ಮಧ್ಯಾಹ್ನ 3 ಘಂಟೆ ಆಗಾಯಿತು 5 ಘಂಟೆಯ ವರೆಗೆ ದಿವಾನ್‌ಸಾಹೇಬರವರ ಆಫೀಸಿನಲ್ಲಿ ಭೇಟಿ ದೊರೆಯುವುದು. ವಿಶೇಷ ಜರೂರು ಸಂದರ್ಭಗಳಿಗೂ, ಭೇಟಿಯ ಬಗ್ಗೆ ಮೊದಲೇ ಕಾಲ ನಿಷ್ಕರ್ಷೆಯಾಗಿರುವ ಸಂದರ್ಭಗಳಿಗೂ ಸಹ ಈ ನಿಯಮವು ಅನ್ವಯಿಸುವುದಿಲ್ಲ.

ಹುಕುಂ ಬಮೋಜೀಬ್,
ಕೆ. ಎಸ್. ಚಂದ್ರಶೇಖರ ಐಯ್ಯರ್,
ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಸಕ್ರಿಟರಿ.